ನ್ಯೂಸ್' ಹೊರಗೆ ಬರುತ್ತದೆ'' ಯಾವಾಗಲೂ ಅವಶ್ಯವಿದ್ದುದಕ್ಕಿಂತ ಎತ್ತರವಾದ ದನಿಯಲೇ ಮಾತನಾಡುವ ಕೆಟ್ಟ ಚಾಳಿಯ ಮ್ಯಾಕೆಲ್ ಕೂಡ ಇಂದು ದನಿ ತಗ್ಗಿಸಿದ್ದ. ಎಲ್ಲರೂ ಹುರುಪಿನಿಂದಲೇ ಅವನ ಭವ್ಯ ಯೋಜನೆಗೆ ಕೂಡಲೇ ಅನುಮೋದನೆಯಿತ್ತರು. ಅದಕ್ಕೊಂದು ಸ್ಪಷ್ಟ ರೂಪಕೊಟ್ಟು ಮನಸ್ಸು ಸಮಾಧಾನಗೊಂಡ ನಂತರವೇ ಮ್ಯಾಕೆಲ್ ದಾರೂವಾಲಾರ ಮನೆ ಬಿಡಲು ಸಿದ್ಧನಾದ. ಆಗ ರಾತ್ರಿ ಒಂಬತ್ತು ದಾಟಿತ್ತು.

## ಭಾಗ–ಮೂರು

ಹಲವು ವರ್ಷಗಳಿಂದ ನಿಂತುಹೋದ 'ಬ್ಯಾಂಡ್ ಸ್ಟ್ಯಾಂಡ್ ನ್ಯೂಸ್'ನ ಪುನರುಜ್ಜೀವನದ ಸಿದ್ಧತೆ ಸಾಕಷ್ಟು ಉತ್ಸಾಹದಿಂದಲೇ ಆಗತೊಡಗಿತು. ಹೊರಬರಲಿದ್ದ ಮೊದಲ ಸಂಚಿಕೆ ಸಂಪೂರ್ಣವಾಗಿ ರಾವ್‌ಜೀಭಾಯಿಯ ಕತೆಗೇ ಮೀಸಲಾಗುವುದಿತ್ತು. ಮ್ಯಾಕೆಲ್ ಪೆರೆರಾ ಆ ದಿನ ಸಂಜೆ ಎಲ್ಲರ ಮುಂದೆ ಎದೆಯುಬ್ಬಿಸಿ ಸಾರಿದ್ದು ಬರಿಯ ವಿಸ್ಕಿಯ ಪ್ರತಾಪದಿಂದ ಅಲ್ಲವಾಗಿತ್ತೆಂದೂ ರಾವ್‌ಜೀಭಾಯಿಯ ಬಗ್ಗೆ ಕೆಲವೇ ಕೆಲವು ಮಾತುಗಳು ಎಲ್ಲರಿಗಿಂತ ಹೆಚ್ಚಾಗಿ ಅವನನ್ನು ಕಾಡಿದ್ದುವು ಎಂದೂ ಯಾರೂ ಹೇಳುವ ಹಾಗಿತ್ತು.
ರಾವ್‌ಜೀಭಾಯಿಯ ಬಗ್ಗೆ ಖುದ್ದಾಗಿ ಮಾಹಿತಿ ದೊರಕಿಸಲು ಹೊರಟಮೇಲಂತೂ ಈ ಮುದುಕನ ಬಗೆಗಿನ ಅವನ ಉತ್ಸಾಹಕ್ಕೆ ಎಣೆಯೇ ಇಲ್ಲವಾಯಿತು. ಸಾಂತಾಕ್ರೂಝಿನಲ್ಲಿ ಈ ಮೊದಲು ವಾಸಮಾಡಿದ ಕೇರಿಯಿಂದ ಹಿಡಿದು ಬಾಂದ್ರಾ ಮಾಹೀಮ್ ಧಾರಾವೀ, ತುಳಸೀಪ್ಯಾಪ್ ರೋಡ್ ಝೋಪಡ ಪಟ್ಟಿಗಳವರೆಗಿನ, ಮಾನಖುರ್ಡ್‌ನ 'ಬೆಗ್ಗರ್ಸ್ ಹೋಮ್'ದಿಂದ ಈ ಎಲ್ಲ ಭಾಗಗಳಿಗೆ ಸೇರಿದ ಪೊಲೀಸ್ ಚೌಕಗಳವರೆಗಿನ... ಅವನ ಬಗ್ಗೆ ತಿಳಿಯಬಹುದಾದ... ಎಲ್ಲ ಜಾಗಗಳಿಂದ ಒಟ್ಟು ಮಾಡಿದ ಮಾಹಿತಿ, ಅದು ಒಟ್ಟು ಆದ ಆದ ಹಾಗೆ, ಸೋರಾಬನ ಮನೆಯಲ್ಲಿ ಚರ್ಚೆಗೆ ಒಳಪಡತೊಡಗಿತು. ಇನ್‌ಸ್ಪೆಕ್ಟರ್ ಜಾಧವ ಕೂಡ ಈ ಚರ್ಚೆಗಳಲ್ಲಿ ಆಗೀಗ ಭಾಗವಹಿಸತೊಡಗಿದ. ರಾವ್‌ಜೀಭಾಯಿಗಿಂತ ಅವರ ಮನೆಯವರಿಗೂ ಆಶ್ಚರ್ಯ ಹುಟ್ಟಿಸಬೇಕು ಎನ್ನುವ ಬೇತಿನಿಂದ ಈ ಎಲ್ಲ ಚಟುವಟಿಕೆಯನ್ನು ಅವರೆಲ್ಲರಿಂದ ಅಡಗಿಸಿ ಇಡುವುದು ನಿಶ್ಚಯವಾಗಿತ್ತು. ಈ ಗುಟ್ಟಿನ ಬಗ್ಗೆ ಚಕಾರವೆತ್ತಿದರೆ ಜೋಕೆ ಎಂದು ಧೋಂಡೂ– ಪಾರ್ವತಿಯವರಿಗೂ ಬಚಾಯಿಸಿ ಹೇಳಲಾಯಿತು. ಮುದುಕನಿಗೆ ಇಂಗ್ಲಿಷ್ ಬಾರದ್ದರಿಂದ ಈ ಸಂಚಿಕೆಯ ಒಂದು ಪುಟವಾದರೂ ಗುಜರಾಥಿಯಲ್ಲಿರಬೇಕೆಂದೂ ಗೊತ್ತಾಯಿತು. ಜಾಧವನಿಂದ ದೊರಕಿಸಿದ ರಾವ್‌ಜೀಭಾಯಿಯ ಫೋಟೊ ಹಾಗೂ ರಜೆಯ ಮೇಲೆ ಹೋದ ಚೌಕೀದಾರನು ತಿರುಗಿ

> **'ಈ ಮೊದಲೂ ಆ ಹುಡುಗನನ್ನು ನಾನು ಪಾರ್ವತಿ ಇಬ್ಬರೂ ನೋಡಿದ್ದೇವೆ. ಇಲ್ಲಿಂದಲೇ. ಈ ಮುಂದಿನ ಬಾಲ್ಕನಿಯಿಂದ ಈಗ ಪಾರ್ವತಿಯೇ ನೆನಪು ಮಾಡಿಕೊಟ್ಟಳು. ಕಳೆದ ನಾಲ್ಕು ದಿನಗಳಿಂದ ದಿನವೂ ಬರುತ್ತಾನೆ.' ಸ್ಪಷ್ಟಪಡಿಸಿದ ಧೋಂಡೂ.**